ಬ್ಯಾಡ. ಅತ್ಲೆ, ಕಾನಲ್ಲೊಂದು ಮತ್ತಿ ಮರ ಹುಟ್ಟಿತು, ಬೆಳತ್ತು, ಒಂದಿನ ಮುರ್ಕಂಡು ಬಿತ್ತು, ಯಂತಾತು? ಇಲ್ಲಿ ಹುಟ್ಟಿ ಬಂದ ಹೆಂಗಸ್ರೆಲ್ಲ ಮದುವ್ಯಾಗ್ಲೇಬೇಕು ಹೇಳಿ ಅದೆಲ್ಲಿ ಬರಕಂಡಿದ್ದು ತೋರ್ಸು ನೋಡನ?' ಅಂತ ಸವಾಲು ಹಾಕ್ತಿತ್ತು. ಮತ್ತೂ ವಟ ವಟ ಮಾಡಿದ್ರೆ 'ನಿಂಗ್ಳನ್ನೆಲ್ಲ ಬಿಟ್ಟಿಕ್ಕೆ ಯಾವ್ದೊ ಕಂಡ ಕೇಳರಿಯದವ್ರ ಸಂಗತಿಗೆ ಹ್ಯಾಂಗೆ ಬದುಕ್ಲೆ?' ಅನ್ನುತ್ತ ಅವಳನ್ನಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತಿತ್ತು. ಒಟ್ಟಿನಲ್ಲಿ ಅವ್ಳಿದ್ದು ಗಣಪತಿ ಮದುವೆಯೇ ಆಗಿ ಹೋತು.... ಶಣ್ಣತ್ತಿಗೆ ಕಂಬದಂತೆ ನಿಂತವಳು ಗಂಡ ಸ್ವಲ್ಪ ಬಿಸಿನೀರು ಹಾಕು ಅಂದಾಗ ಈ ಪ್ರಪಂಚಕ್ಕೆ ಬಂದಳು.

ಆರನೇ ದಿನ ಮಾತಾಡಿಸಿಕೊಂಡು ಹೋಗಲು ಬಂದ ನಾಗು ಚಿಕ್ಕಿ ಯಾವತ್ತಿನಂತೆ ತನ್ನ ಕತೆಯ ಸಂಚಿ ಬಿಚ್ಚಿಯೇ ಬಿಚ್ಚಿದಳು. ಅವ್ಳಿಗೆ ಗಾಯತ್ರಿಯ ಗಂಡನೂ ಸಂಬಂಧ. ಹೀಗಾಗಿ ಹೂಬೆ ಹೂಬು ಮಾತಾಡುತ್ತಾಳೆ.

ಅಯ್ಯೊ! ನಿಂಗೊತ್ತಾತ ಗಾಯತ್ರಿ ಮನೆ ಸುದ್ದಿ? ಅದೆಂಥಾ ಏಳರಾಟದ ಶನಿ ಹಿಡದಿತ್ತೊ ಅದಕೆ, ಅಲ್ಲಲ್ಲ. ಅದರ ಗಂಡನಿಗಿಂತ ದೊಡ್ಡ ಶನಿ ಮತ್ತಾವ್ದಿರಲೆ ಸಾಧ್ಯ ಇಲ್ಲೆ ಬಿಡು. ಆದ್ರೂ ಅದರ ಗ್ರಾಚಾರ ನೋಡು, ಮದುವ್ಯಾದಾರಭ್ಯದಿಂದ ಸಾಯ್ವಲ್ಲಿವರಿಗೂ ಒಂದೆ ಹಾಡಾಗಿಹೋತು. ಒಂದಿನ ಒಂದು ತುತ್ತು ಸುಖದ ಕೂಳು ಕಂಡಿದ್ದಿಲ್ಲೆ ಸುಟ್ಟ ಕೂಸು. ಅತ್ತೇರಿಪ್ಪಲ್ಲಿವರಿಗೆ ಹ್ಯಾಂಗೊ ಇಬ್ಬರೂ ಸೇರಿ ತೇರೆಳಿತಿದ್ರು. ಅವ್ರೂ ಸತ್ತ ಮ್ಯಾಲೆ ಬೇಕಾರೆ ಗಾಯತ್ರಿ ಖರೆವಾಗ್ಲು ಪರದೇಸಿಯೇ ಆಗಿಬಿಟ್ಲು. ಆ ಶಣ್ಣ ಶಣ್ಣ ಮಕ್ಕಳ ಕಟ್ಟಿಗ್ಯಂಡು ಇಂಥಾ ಗಂಡನ ಸಂಗ್ತಿಗೆ ಅದು ಹ್ಯಾಂಗೆ ಏಗ್ತಾ ಬಂತೊ ಪರದೇಸಿ! ಆ ದೇವ್ರಿಗು ಕಣ್ಣಿಲ್ಲೆ ನೋಡು, ಕೆಲ ಕೆಲವು ಜನಕ್ಕೆ ಈ ಭೂಮಿಯಲ್ಲೇ ವೈತರಣಿ ನದಿ ಕಾಣಿಸಿಬಿಡ್ತ. ಈ ಜನ್ಮದಲ್ಲಂತೂ ಅದು ಒಂದು ಜರ್ಲೆ ಕೊಂದಿದ್ದೂ ಸುಳ್ಳು. ಆದ್ರೂ ಕುಂಭಿಪಾಕ ನರಕದಲ್ಲಿ ಬಿದ್ದು ಒದ್ದಾಡಿ ಬಿಟ್ಲು...ಈಗನ ಕಾಲದ ಹೆಣ್ಣಾಗಿದ್ದಿದ್ರೆ ಒಂದೇ ಒಂದು ಚಣ ಅವ್ನ ಸಂಗ್ತಿಗಿರ್ತಿತ್ತಿಲ್ಲೆ....ಮಂತ್ರಕ್ಕಿಂತ ಉಗುಳೇ ಜಾಸ್ತಿ ನಾಗು ಚಿಕ್ಕಿದು.

'ಗಾಯತ್ರಿಗೆ ಸಾಯ್ವಂಥದ್ದೆಂತಾ ಆಗಿತ್ತೆ? ಇನ್ನೂ ಅರುವತ್ತರ ಎಡ ಬಲ ಇತ್ತನ. ಯಮ್ಮನೆ ಪಬ್ಬಿ ಕ್ಲಾಸಿಂದೇ ಆಗಿತ್ತಡಲೆ?' ದೊಡ್ಡತ್ತಿಗೆ ಅಂದ್ರೆ ಸೀತಣ್ಣನ ಹೆಂಡತಿ ಪಟಕ್ಕನೆ ಕೇಳಿ ಚಿಕ್ಕಿಯನ್ನು ಅಸಲಿ ಸಂಗ್ತಿಗೆ ಎಳೆದಳು.

ಹೌದು, ಯನ್ನ ಕಣ್ಣೆದರಿಗೇ ಹುಟ್ಟಿ ಬೆಳದ ಕೂಸು. ಇಷ್ಟು ಬ್ಯಾಗ ಹೋಗಕಾಗಿತ್ತಿಲ್ಲೆ. ಇದನೆಲ್ಲಾ ನೋಡಿಕ್ಯತ್ತ ಆನಿನ್ನೂ ಬದುಕ್ಯಂಡಿದ್ದಿ ನೋಡು. ಯನ್ನಂತಾ ಮುದಿ ಕೊರಡು ಹೊಳ್ಯಲ್ಲಿ ತೇಲ್ತೂ ಇಲ್ಲೆ, ಬೆಂಕ್ಯಲ್ಲಿ ಸುಡ್ತೂ ಇಲ್ಲೆ. ಹಾಂಗ್ಹೇಳಿ ಸತ್ತವರ ಸಂಗ್ತಿಗೆ ನಾವೂ ಸಾಯಲೆ ಬರ್ತನೆ? ನಾವು ನಾವು ಪಡಕಂಡು ಬಂದಿದ್ದ ನಾವು ನಾವೆ ಉಂಡುಕಂಡ್ಹೋಗವು, ಅಷ್ಟೆಯ. ಆದ್ರೂ ಗಾಯತ್ರಿಗ್ಹೀಂಗಾಗ ಕಾಗಿತ್ತಿಲ್ಲೆ...ಚಿಕ್ಕಿ ಮತ್ತೊಂದು ಎಲೆ ಶಿರಿ ತೆಗದು ಅಡಿಕೆ ಹೋಳಿನೊಂದಿಗೆ ಬಾಯಿಗೊಗೆದಳು ತಾನೇನೊ ಮಹಾ ಸುಭಗಿತ್ತಿ ಎಂಬ ಪೋಜಿನಲ್ಲಿ. ಎರಡುಸುತ್ತು ಕವಳ ಜಗಿದು ದವಡೆಗೊತ್ತಿಕೊಂಡು ಸುತ್ತಾ ಒಂದು ಬಾರಿ ಕಣ್ಣು ಹಾಯಿಸಿ ಮತ್ತೆ ಮಾತು ಶುರು ಹಚ್ಚಿದಳು.

ಮಕ್ಕ ಹುಟ್ಟಿ ಹುಟ್ಟೀ ಇಂಥಾ ಮಕ್ಕ ಮಾತ್ರ ಯೋಳ್ಜೋಳು ಜನ್ಮಕ್ಕೂ ಹುಟ್ಲಾಗ ನೋಡು. ಗಂಡಂತೂ ಬರೀ ಖಾಸಾಭದ್ರ, ಅವ್ನ ಹಣೆಬರಾನೆ ಅಷ್ಟಾತು, ಆದ್ರೆ ಮಗನೂ ಅವನಪ್ಪ ಆಗಿಹೋದ ಅಂದ್ರೆ ಯಾವ ತಾಯಿಗೆ ಬದುಕಲಾಗ್ತೆ?...ಗಾಯತ್ರಿ ಮಗ ಸದೂ ಎಂಥಾ ಗನ ಪೋರಾಗಿದ್ದ! ಅಪ್ಪನ ಯಾಶ ಕಂಡು ಕಂಡು ಹೇಸಿಗೆ ಹಿಡದು ಹೋಗಿತ್ತು ಅಂವಂಗೆ. ಮಗ ಕೈಗೆ ಬಂದ, ಇನ್ನು ಅಡ್ಡಿಲ್ಲೆ ಗಾಯತ್ರಿಗೆ ಹೇಳಿ ಯಂಗ ಎಲ್ಲಾ ತೆಳಕಂಡ್ರೆ ಅಕ್ಕಿ ತಿಂಬಂವ ಹೋಗಿ ಭತ್ತ ತಿಂಬಂವ ಬಂದ. ಕಾಲೇಜು ಮುಗ್ಸಿ ಬಂದಿದ್ದೇ ಬಂದಿದ್ದು, ಆ ಸುಟ್ಟ ಯಂಕನ ಸಾವಾಸಕ್ಕೆ ಬಿದ್ದು ಪೂರ್ತಿ ಹಾಳಗ್ಹೋದ, ಗೊತ್ತಾತ. ಕುಡಿಯದಂತೂ ಆತು, ಯಾವ್ಯಾವುದೊ ಹೆಂಗ್ಸರ ಸಾವಾಸ ಆತು, ಮನೀಗ್ಬಂದ್ಕಂಡು ಒದರೋದಾತು, ಕಡ್ಡಿ ಕೆಲಸಿಲ್ದೆ ಹಗಲೆಲ್ಲಾ ಬಿದ್ಕಂಬುದಾತು, ಹೆತ್ತ ತಾಯಿಗು ಬಡಿಗೆ ತಗಂಡು ದನ ಬಡ್ದಾ ಬಡದ್ರೆ ಯಾರು ತಡಕತ್ತೆ?... ಅದೇನಾಗಕಾಗಿತ್ತೊ ಆತು. ಆ ಸುಟ್ಟ ಕೂಸಿಗೆ ಈ ಹಾಳ್ ಬದುಕ್ನಿಂದ ಮುಕ್ತಿ ಸಿಕ್ತು. ಆದ್ರೆ ಸತ್ತ ಹೆಣಕ್ಕಾದ್ರೂ ನೆರುಂಬ್ಳಾಗಿ ಒಂದು ಗತಿ ಕಾಣ್ಸೆದ್ವನೆ? ಅದೂ ಇಲ್ಲೆ. ಆ ದೇವ್ರು ಮನುಷ್ರಿಗ್ಯಾಕಿಂತಾ ಬುದ್ದಿ ಕೊಡ್ತ್ನೊ, ಅವಂಗೇ ಗೊತ್ತು...ಬಾಯಲ್ಲಿ ಕವಳ ತುಂಬಿಕೊಂಡೇ ಗೊಜ ಗೊಜ ಮಾತಾಡುತ್ತಿದ್ದ ಚಿಕ್ಕಿ ಸರಕ್ಕನೆ ಮೇಲೆದ್ದು ಹೋಗಿ ಕವಳ ತುಪ್ಪಿ ಬಂದು ಮುಂದುವರಿಸಿದಳು...

ತಾಯಿ ಅಂಬೊ ಹೆಂಗಸು ಮಗನ ಹೊಡ್ತ ತಾಳಲಾರ್ದೆ ಬಾವಿಗೆ ಹಾರಿ ಕೊಂಡಾಗ ಅಪ್ಪ ಮಗ ಇಬ್ರೂ ಅದನ್ನು ತೆಗಿಯೊ ಸುದ್ದಿಗ್ಹೋಗದೆ ನೀನು ತಾನು ಎಂದು ಕೈ ಕೈ ಹಿಡದು ಗುದ್ದಾಡ್ತಾ ಇದ್ದರಂತೆ. ಅವ್ರ ಗಲಾಟೆ ಕೇಳಿ ಬಂದ ಆಚೀಚೆ ಮಂದಿ ಅವಳನ್ನು ಬಾವಿಯಿಂದೆತ್ತಿ ಮಲಗಿಸಿದ್ರೂ ಇವರಿಬ್ರು ಕಣ್ಣೆತ್ತಿ ನೋಡ್ದೆ ಹೊಡದಾಡಿ ಸಾಕಾಗಿ ಬಿದ್ದುಕೊಂಡಿದ್ರಂತೆ. ನಡುಮನೆ ಶಂಕ್ರಣ್ಣ ಅವ್ರಿಬ್ರ ಮೈಗೂ ತಣ್ಣೀರು ಹೊಯ್ದು ಎಚ್ಚರಾದ್ರೂ ಮತ್ತಲ್ಲೇ ಜಗಳ ಶುರು ಹಚ್ಚಿಕೊಂಡ್ರಂತೆ. ಈಗೆಂತಾ ಮಾಡೋದು? ಯಾರ್ಯಾರಿಗೆ ಫೋನು ಮಾಡೋದು? ಪೋಲ್ ಗೀಲೀಸ್ರು ಬರೊದ್ರೊಳಗೆ ಸುಟ್ಟು ಹಾಕೋದು ಹ್ಯಾಂಗೆ? ಅನ್ನೊ ವಿಚಾರನೇ ಮಾಡ್ದೆ ಜಗಳಾಡ್ತಾನೇ ಇದ್ರಂತೆ. ತಾಸೆರಡು ತಾಸು ಇವ್ರ ಹಗಲ ವೇಷ ನೋಡಿ ನೋಡಿ ಸಾಕಾದ ಊರ ಜನವೇ ಸೇರಿ ಭಟ್ರು ಗಿಟ್ರು ಕ್ರಿಯಾ ಕರ್ಮ ಎಂತದೂ ಇಲ್ದೆ ಸುಟ್ಟು ಹಾರ್ಸಿದರಂತೆ...ನಿಮ್ಮನೆ ಪಬ್ಬಿಯೂ ಬಂದಿತ್ತಲೆ. ಎಲ್ಲ ಕತೆ ಹೇಳಿಕ್ಕು... ಚಿಕ್ಕಿ ತನ್ನ ಕೆಲಸ ಮುಗ್ಸಿ ಮೇಲೆದ್ದಳು.



ಹೊರಗಿನ ಮಳೆಯಂತೆ ಎದೆಯೊಳಗೂ ಕರುಳೊಳಗೂ ರಪ ರಪ ಬಾರಿಸಿದ ಸುದ್ದಿಯ ಹೊಡೆತಕ್ಕೆ ತತ್ತರಿಸಿ ಕುಳಿತ ಹೆಂಗಸರು ಮಕ್ಕಳು ಮಾತ್ರವಲ್ಲದೆ ನೀರು ಕುಡಿಯಲು ಒಳಗೆ ಬಂದು ಚಿಕ್ಕಿಯ ಕತೆ ಕೇಳುತ್ತ ಬಾಗಿಲಲ್ಲೇ ನಿಂತ ಶಣ್ಣಣ್ಣನೂ ಸೇರಿ ಎಲ್ಲರು ಬೆಪ್ಪು ಬೆರ್ಚಪ್ಪಗಳಾಗಿಬಿಟ್ಟಿದ್ದರು. ಮತ್ತೆರಡು ನಿಮಿಷಕ್ಕೆ ಈಚೆ ಬಂದ ಶಣ್ಣಣ್ಣ 'ಎಲ್ಲಾ ಕಂಡ್ವಾಂಗಾತಲಿ, ಎದ್ಕಳಿ, ನಿಮ್ಮ ನಿಮ್ಮ ಹ್ವಾರ್ಯ ನೋಡಿ, ಹಂ' ಎಂದು ಜಬರಿಸಿ ತನ್ನ ಕೆಲಸಕ್ಕೆ ಹೋದಾಗ ಉಳಿದವರೂ ಮೇಲೇಳಲೇಬೇಕಾಯ್ತು....ಪಬ್ಬಿ ಗಾಯತ್ರಿ ಮನೆಯಿಂದ ಬರುವಾಗಲೇ ನಡುಗುತ್ತ ಅತ್ಗೆ ಯಂಗೊಂದ್ಲೋಟ ಚಾ...ಅಂದಾಗಲೇ ಶಣ್ಣತ್ತಿಗೆಗೆ ಏನೊ ವಿಚಿತ್ರವೆನಿಸಿತ್ತು. ಮೈ ತೊಯ್ಸಿಕೊಂಡು ಬಂದಿದ್ದಾಳೆ, ಅದಕೇ ನಡುಕ ಎಂದು ಚಾ ಮಾಡಿಕೊಟ್ಟಾಗ ಸ್ಮಶಾನದಿಂದ ಬಂದವಳು ಮೀಯದೆ ಕುಡಿದು, ಏನಾಯ್ತೆಂದು ಕಣ್ಣಲ್ಲೇ ಕೇಳಿದ ಶಣ್ಣತ್ತಿಗೆಯಿಂದ ಮುಖ ಅಡ್ಡ ಹಾಕಿ ದುಡು ದುಡು ಹೋದಾಗ ಅತ್ತಿಗೆ ಮತ್ತಷ್ಟು ಪೆಚ್ಚಾಗಿದ್ದಳು. ಮರು ಬೆಳಿಗ್ಗೆ ನೋಡಿದರೆ ಬೆಂಕಿ ಕೆಂಡದಂಥ ಜ್ವರ! ಅಂದರೆ?..ಅಂದರೆ?..

ಎಂಟನೇ ದಿನ ಬೆಳಿಗ್ಗೆ ಆಸ್ರಿಗೆ ಕುಡಿಯುತ್ತ ಸೀತಣ್ಣ 'ಆನಿವತ್ತು ಗೋಕರ್ಣಕ್ಹೋಗ್ತಿ. ನಾಳೆ ಕ್ರಿಯಾ ಹಿಡಿಲಕ್ಕು ಹೇಳಿದ್ರು ಭಟ್ರು' ಅಂದ. ದೋಸೆ ಎರೆಯುತ್ತಿದ್ದ ದೊಡ್ಡತ್ತಿಗೆ ಅಂದರೆ ಸೀತಣ್ಣನ ಹೆಂಡತಿ ದಡಕ್ಕನೆ ಎದ್ದು ನಿಂತು 'ಸಾಕು, ನಿಂಗಳ ಕರ್ಮವೂ ಸಾಕು, ಧರ್ಮವೂ ಸಾಕು. ಪಬ್ಬಿ ಮಾತ್ರವಲ್ಲ, ನಾಳೆ ಆಂ ಸತ್ತು ಬಿದ್ದಾಗ್ಲೂ ಸುಮ್ನೆ ಸುಟ್ಟು ಹಾಕಿಬಿಡಿ ಅಷ್ಟೆಯ. ಈ ಸುಡುಗಾಡಿನ ಹೆಣ್ಣು ಜನ್ಮದಲ್ಲಿ ಬಂದು ಬಿದ್ದವರ ಹೆಣ ನಾಯಿ ನರಿ ಪಾಲಾಗದಿದ್ದಾಂಗೆ ಬೆಂಕಿ ಹಚ್ಚಿ ಬೂದಿ ಮಾಡ್ಬಿಡಿ. ಮತ್ತೆ ನಿಂಗಳ ಶಾಸ್ತ್ರ ಸೂತ್ರ ಎಲ್ಲ ನಿಂಗಕ್ಕಗೇ ಇರ್ಲಿ' ಅನ್ನುತ್ತ ಮತ್ತೆ ದೋಸೆ ಎರೆಯತೊಡಗಿದಾಗ ಎಲ್ಲರೂ ಅವಳ ಮುಖವನ್ನೇ ಮಿಕಿ ಮಿಕಿ ನೋಡಿದರೇ ಹೊರತು ಮಾತಾಡಲಿಲ್ಲ.